ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನ ಹಾಗೂ ಸಕ್ಕರೆ ಸಚಿವರು):

ಅ) ಪಶುವೈದ್ಯ ಆಸ್ಪತ್ರೆ - 2

ಪಶುಚಿಕಿತ್ಸಾಲಯ - 1

ಒಟ್ಟು 3

ಇಲ್ಲ.

ಆ) ಇದೆ.

ಉದ್ಭವಿಸುವುದಿಲ್ಲ, ರೈತರ ಬೇಡಿಕೆಗಳನ್ನು ಪೂರೈಸಲು ಅವಶ್ಯಕತೆಯಿರುವ ವರೆಗೆ ಈ ಸೇವೆಯು ಚಾಲನೆಯಲ್ಲಿರುವುದು.

ಇ) ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ಸುತ್ತ ಮುತ್ತಲಿರುವ ಪ್ರವಾಸಿ ಕೇಂದ್ರಗಳು.

71(148)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ): ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತಲಿನ ಯಾವ ಯಾವ ಸ್ಥಳಗಳನ್ನು ಪ್ರವಾಸಿ ಪ್ರೇಕ್ಷಣೀಯ ಸ್ಥಳಗಳೆಂದು ಘೋಷಿಸಲಾಗಿದೆ?

ಆ) ಈ ಪ್ರೇಕ್ಷಣೀಯ ಸ್ಥಳಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಪ್ರತಿದಿನ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೆ?

ಇ) ಬೆಂಗಳೂರು ಮತ್ತು ಬೆಂಗಳೂರು ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಖಾಸಗೀ ಬಸ್ಸಿನವರಿಗೆ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉತ್ತೇಜನ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು):

ಅ) ಬೆಂಗಳೂರು ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ಪ್ರೇಕ್ಷಣೀಯ ಸ್ಥಳಗಳೆಂದು ಘೋಷಿಸಲಾಗಿದೆ:

1) ಮುತ್ಯಾಲಮಡುವು

2) ಶಿವಗಂಗೆ

3) ಸಾವನದುರ್ಗ

4) ಮೇಕೆದಾಟು

5) ರಾಮೋಹಳ್ಳಿ

6) ರೇವಣಸಿದ್ದೇಶ್ವರಬೆಟ್ಟ

7) ಘಾಟಿ ಸುಬ್ರಮಣ್ಯ.

ಆ) ಇಲ್ಲ.

ಇ) ಇಲ್ಲ.

ಲಾಲ್ ಬಾಗಿನ ಅಕ್ವೇರಿಯಂಗೆ ಬರತಕ್ಕ ಪ್ರವಾಸಿಗಳ ಸಂಖ್ಯೆ.

72(149)

ಶ್ರೀ ರಾಮಲೀಂಗರೆಡ್ಡಿ, (ಜಯನಗರ): ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್ ಬಾಗಿನಲ್ಲಿರುವ ಅಕ್ವೇರಿಯಂಗೆ ಪ್ರತಿ ದಿನ ಸರಾಸರಿ ಬರತಕ್ಕ ಪ್ರವಾಸಿಗಳ ಸಂಖ್ಯೆ ಎಷ್ಟು?

ಆ) ಇದಕ್ಕೆ ವಿಧಿಸಿರುವ ಪ್ರವೇಶ ಶುಲ್ಕ ಎಷ್ಟು?

ಇ) ಲಾಲ್ ಬಾಗಿಗೆ ಪ್ರವೇಶ ಶುಲ್ಕವಿರುವುದರಿಂದ ಪ್ರವಾಸಿಗರು ಮತ್ತೆ ಇದಕ್ಕಾಗಿ ಪ್ರವೇಶ ಶುಲ್ಕ ತೆರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಉ) ಈ ಅಕ್ವೇರಿಯಂ ಅನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?